ಮೈಸೂರಿನವರಾದ ಅರುಣ್ ಕುಮಾರ್ ರಾವ್ ಭಾರತದ ವಿವಿಧೆಡೆ ಹಾಗೂ ವಿದೇಶಗಳಲ್ಲಿ ಕಾರ್ಪೊರೇಟ್ ಕಂಪೆನಿಗಳಲ್ಲಿ 45 ವರ್ಷಗಳಿಗೂ ಹೆಚ್ಚು ಕಾಲ ಕೆಲಸ ಮಾಡಿ ಪ್ರಸ್ತುತ ನಿವೃತ್ತರು. ಇಂಗ್ಲಿಷ್ ಮತ್ತು ಕನ್ನಡದಲ್ಲಿ ಕಥೆ, ಲೇಖನಗಳನ್ನು ಬರೆಯುವುದು ಅವರ ಹವ್ಯಾಸ. ಇಂಗ್ಲಿಷ್ ಕಾದಂಬರಿಗಳನ್ನು ಬರೆದು ಪ್ರಕಟಿಸಿರುವ ಅವರು ಪ್ರಸ್ತುತ ಬೆಂಗಳೂರು ನಿವಾಸಿ.

ಹೊರ ಹಾಕುತ್ತಿವೆ. ಮಹಿಳೆಯರು ಅದನ್ನು ಗೋಣಿಚೀಲಗಳಲ್ಲಿ ತುಂಬುತ್ತಿದ್ದಾರೆ. ಇನ್ನೊಂದು ಗುಂಪು ಚೀಲಗಳನ್ನು ಹೊಲಿಯುತ್ತಿದೆ. ಒಂದು ಮೂಲೆಯಲ್ಲಿ ಇನ್ನೊಂದು ಗುಂಪಿನ ಮಹಿಳೆಯರು ಖಾಲಿ ಚೀಲಗಳನ್ನು ತೂಗಿ ರಾಶಿ ಮಾಡುತ್ತಿದ್ದಾರೆ. ಅವರು ನನ್ನಂತೆ ಮತ್ತು ನನ್ನ ಸಹಾಯಕಿಯಂತೆ ಮುಖ ಮುಚ್ಚಿಕೊಂಡಿದ್ದಾರೆ. ನಾವು ಅವರ ಜೊತೆ ಸೇರಿದೆವು.

ಮಧ್ಯಾಹ್ನ ಊಟಕ್ಕೆ ಅನ್ನ, ಮೀನಿನ ಸಾರು ಮತ್ತು ಉಪ್ಪಿನಕಾಯಿ. ಗೋದಾಮಿನಿಂದ ಮರಳುವಾಗ ಒಬ್ಬ ವ್ಯಕ್ತಿ ನಮ್ಮನ್ನು ಹಿಂಬಾಲಿಸುತ್ತಿದ್ದಾನೆ ಎಂಬ ಅನುಮಾನ ನನಗೆ ಬಂತು. ಊಟದ ಮಧ್ಯೆ, ಸಂಶಯದಿಂದ ನಾನು ಏಕಾಏಕಿ ಎದ್ದು ಕಿಟಕಿಯಿಂದ ಹೊರಗೆ ನೋಡಿದೆ. ಅಲ್ಲಿ ಅವನು ನಮ್ಮ ಗುಡಿಸಲಿನ ಎದುರಲ್ಲೇ ನಿಂತಿದ್ದಾನೆ. ನಾನು ನನ್ನ ಸಹಾಯಕಿಯನ್ನು ಎಚ್ಚರಿಸಿದೆ. ಇಬ್ಬರೂ ಹೊರಗೆ ಧಾವಿಸಿದೆವು. ಆದರೆ ಕೆಲವೇ ಕ್ಷಣಗಳಲ್ಲಿ ಅವನು ಕಾಣೆಯಾದ. ನನ್ನ ಬೆನ್ನೆಲುಬಿನಲ್ಲಿ ಚಳಿ ಹರಿದಂತೆ ಭಾಸವಾಯಿತು.

ಸಂಜೆ ಸೂರ್ಯಾಸ್ತದ ಸಮಯ. ಹೊರಗೆ ಕತ್ತಲಾಗುತ್ತಿದೆ. ಆ ಮಹಿಳೆ ನನ್ನನ್ನು ಒಳಗೆ ಒಬ್ಬಳನ್ನೇ ಬೀಗ ಹಾಕಿ, ಒಂದು ಗಂಟೆಯ ನಂತರ ಮರಳಿದಳು. ನನಗೆ ಅಶಾಂತ ಭಯ ಆವರಿಸಿತು. ಅವಳು ನನಗೆ ಒಂದು ಸಣ್ಣ ಚೀಟಿಯನ್ನು ಕೊಟ್ಟಳು:

ಪ್ರಶ್ನೆ: 'ನಿನ್ನ ನೆಚ್ಚಿನ ಸಾಕುಪ್ರಾಣಿ?'

ಉತ್ತರ: 'ಕೆಂಪು ಕೋಬ್ರಾ'

ನಾನು ಅದನ್ನು ಮನಃಪಾಠ ಮಾಡಿಕೊಂಡು ಚೀಟಿ ಹರಿದು ಹಾಕಿದೆ.

ಅವಳು, 'ನಾಳೆ ಬೆಳಗ್ಗೆ 4 ಗಂಟೆಗೆ ನೀನು ಹೊರಡಬೇಕು'.

ನಾಗ್ವಾಲ್ ಬಗ್ಗೆ ನನಗೆ ಚಿಂತೆ. ನಾನು ಸಹಾಯಕಿಯನ್ನು ಕೇಳಿದೆ. 'ನನ್ನ ಸಹಚರ ಎಲ್ಲಿ?'

ಅವಳು, 'ಚಿಂತಿಸಬೇಡ, ಎಲ್ಲವೂ ವ್ಯವಸ್ಥೆ ಮಾಡಲಾಗಿದೆ'.

ರಾತ್ರಿ ಊಟಕ್ಕೂ ಅದೇ ಮೆನು, ಅನ್ನ, ಮೀನಿನ ಸಾರು ಮತ್ತು ಉಪ್ಪಿನಕಾಯಿ. ಆ ಸಮಯದಲ್ಲಿ ಏಕಾಏಕಿ ಹೊರಗೆ ಗದ್ದಲ ಕೇಳುತ್ತದೆ. ಆ ಮಹಿಳೆ ಬಾಗಿಲು ತೆರೆದಳು. ಪುರುಷರು ಮತ್ತು ಮಹಿಳೆಯರ ಗುಂಪೊಂದು ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಓಡುತ್ತಿದೆ.

ಅವಳು, 'ನಿಲ್ಲು, ಏನಾಗಿದೆ ಎಂದು ನೋಡಿ ಬರುತ್ತೇನೆ' ಎಂದಳು.

ನನಗೆ ಕುತೂಹಲವಾಗಿ, 'ನಾನೂ ನಿನ್ನ ಜೊತೆ ಬರಬೇಕು' ಎಂದು ಒತ್ತಾಯಿಸಿದೆ.

ಅವಳು ಎಚ್ಚರಿಕೆಯ ಧ್ವನಿಯಲ್ಲಿ, 'ಮುಖ ಮುಚ್ಚಿ ಕೊಳ್ಳೋಣ'ಎಂದಳು.

ಮನೆಗೆ ಬೀಗ ಹಾಕಿ, ನಾವು ಇಬ್ಬರೂ ಆ ಗುಂಪಿನ ಹಿಂದೆ ವೇಗವಾಗಿ ಹೋದೆವು. ಒಂದು ದೊಡ್ಡ ಅರಳಿಮರದ ಬಳಿ ಈಗಾಗಲೇ ಜನಸಂದಣಿ ಸೇರಿದೆ. ಕುತೂಹಲದಿಂದ ನಾನು ಹತ್ತಿರ ಹೋಗಿ ನೋಡಿದೆ. ಭೀತಿಯಿಂದ ನನ್ನ ಕಾಲುಗಳು ನಡುಗುತ್ತಿದ್ದವು. ಒಬ್ಬ ವ್ಯಕ್ತಿಯ ಶವ ಮರದ ಕೊಂಬೆಗೆ ನೇತಾಡುತ್ತಿತ್ತು. ನನ್ನ ಸಹಾಯಕಿ ನನ್ನ ಕೈ ಹಿಡಿದು ಹಿಂದಕ್ಕೆ ಎಳೆದಳು. ನಾವು ಮನೆಗೆ ಮರಳುತ್ತ ಅವಳನ್ನು ಪ್ರಶ್ನಾರ್ಥಕವಾಗಿ ನೋಡಿದೆ.

ಅವಳು, 'ಅವನನ್ನು ಗುಂಡಿಕ್ಕಿ ಕೊಂದಿದ್ದಾರೆ. ಅವನು ಯಾರು ಬೇಕಾದರೂ ಇರಬಹುದು— ಖಬ್ರಿ, ಗುಪ್ತಚರ ಅಥವಾ ಬಂಡಾಯಗಾರ. ಕೇವಲ ಒಂದು ತುಣುಕಿನಷ್ಟು ಸಂಶಯ ಸಾಕು'. ಆ ಕ್ಷಣದಲ್ಲಿ ಮಧ್ಯಾಹ್ನ ನಮ್ಮನ್ನು ಹಿಂಬಾಲಿಸಿದ್ದ ವ್ಯಕ್ತಿ ನನ್ನ ಮನಸ್ಸಿಗೆ ಬರುತ್ತಾನೆ. ಅವನ ಮುಖ ನನಗೆ ಇನ್ನೂ ಸ್ಪಷ್ಟವಾಗಿ ನೆನಪಿದೆ. ಆದರೆ ಕತ್ತಲಿನಲ್ಲಿ,